**ದಿನಾಂಕ:16/08/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ.ಎಸ್. ವಕೀಲರಿಂದ:**

1. ನನಗೆ ಈ ಕೇಸಿನ ವಿದ್ಯಾಮಾನದ ಬಗ್ಗೆ ಗೊತ್ತು. ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಬರೆದುಕೊಟ್ಟ ಕ್ರಯಪತ್ರದಲ್ಲಿ ಚಕ್ಕಬಂದಿ ಸರಿ ಇತ್ತು, ಸರ್ವೆ ನಂಬರ್ ತಪ್ಪಾಗಿತ್ತು ಅದ್ದರಿಂದ ಪರಿಹಾರ ಕೇಳಿ ಈ ದಾವೆಯನ್ನು ಹೂಡಿದ್ದೇನೆ. ದಾವಾ ಷೆಡ್ಯೂಲ್ ಸ್ವತ್ತು ಮೂಲತಃ ಅಣ್ಣೇಗೌಡರಿಗೆ ಸೇರಿದ್ದು. ನಾನು ಹಾಗೂ ನನ್ನ ತಂದೆ ಬ್ಯಾಂಕಿನಲ್ಲಿ ಸಾಲವನ್ನು ಪಡೆದಿದ್ದೆವು. ಅದ್ದರಿಂದ ನನಗೆ ಎಲ್ಲಾ ದಾಖಲಾತಿಗಳ ಬಗ್ಗೆ ಮಾಹಿತಿ ಇತ್ತು. ನನ್ನ ತಂದೆ ತೀರಿಕೊಂಡು 25 ವರ್ಷ ಕಳೆದಿದೆ. ನನ್ನ ತಂದೆ ಅವರ ಜೀವಿತ ಕಾಲದಲ್ಲಿ ಸಾಲ ಪಡೆಯಲು ಆಸ್ತಿಗಳನ್ನು ಒತ್ತೆ ಇಡುತ್ತಿದ್ದರು. ಆದ್ದರಿಂದ ನನಗೆ 25 ವರ್ಷಗಳ ಹಿಂದೆ ಎಲ್ಲಾ ಆಸ್ತಿಗಳ ಬಗ್ಗೆ ಮಾಹಿತಿ ಇತ್ತು.

2. ದಾವಾಸ್ವತ್ತು ಮೂಲತಃ ದೊಡ್ಡಮ್ಮನ ಮಗಳು ಮಾಯಮ್ಮ ರವರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ಮಾಯಮ್ಮ ರವರನ್ನು ಅನಿವಾಳು ಗ್ರಾಮದ ಸಣ್ಣೇಗೌಡ ರವರೊಂದಿಗೆ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಣ್ಣೇಗೌಡರು ಯಾರು ಎಂದು ನನಗೆ ಗೊತ್ತಿಲ್ಲ. ಕ್ರಯಪತ್ರದಲ್ಲಿದ್ದ ವ್ಯಕ್ತಿಗಳ ಮತ್ತು ವಿಳಾಸದ ಮಾಹಿತಿಯನ್ನು ನಾನು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ. ಅಣ್ಣೇಗೌಡ ನನಗೆ ಖುದ್ದಾಗಿ ಪರಿಚಯ ಇದ್ದಾರೆ. ಅಣ್ಣೇಗೌಡರವರ ಜಮೀನು ನಮ್ಮ ಜಮೀನಿನ ಪಕ್ಕದಲ್ಲಿದೆ ಅದ್ದರಿಂದ ಅವರ ಪರಿಚಯ ಇದೆ. ದಾವಾ ಷೆಡ್ಯೂಲ್ ಸ್ವತ್ತು ದೊಡ್ಡಮ್ಮ ನವರ ಮಗಳು ಮಾಯಮ್ಮ ರವರಿಗೆ ಸೇರಿದ್ದು ಆದ್ದರಿಂದ ಅವರೇ ಅವರ ಜೀವಿತ ಕಾಲದಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ.

3. ಸಣ್ಣೇಗೌಡರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ ಮತ್ತು ತಿಳಿದುಕೊಳ್ಳಲು ನಾನು ಪ್ರಯತ್ನ ಪಟ್ಟಿಲ್ಲ. ಸಣ್ಣೇಗೌಡರಿಗೆ ಅಣ್ಣೇಗೌಡ ಮತ್ತು ಶಿವಣ್ಣ ಎಂಬ ಇಬ್ಬರು ಮಕ್ಕಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಾಯಮ್ಮ ಮತ್ತು ಸಣ್ಣೇಗೌಡ

ದಂಪತಿಗಳ ಮಕ್ಕಳಾದ ಶಿವಣ್ಣ ಮತ್ತು ಅಣ್ಣೇಗೌಡ ಅವರ ಎಲ್ಲಾ ಆಸ್ತಿಗಳಿಗೆ ಹಕ್ಕು, ಮಾಲೀಕತ್ವ ಮತ್ತು ಸ್ವಾಧೀನದಲ್ಲಿದ್ದರು ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಸ.ನಂ. 83 ರಲ್ಲಿ ಒಟ್ಟು 9 ಎಕರೆ 26 ಗುಂಟೆ ಜಮೀನಿನಲ್ಲಿ ಅಣ್ಣೇಗೌಡ ಮತ್ತು ಅವರ ಮಕ್ಕಳು ಹಕ್ಕು ಮತ್ತು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಎಷ್ಟು ಎಕರೆ ಜಮೀನಿನಲ್ಲಿದ್ದಾರೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಸದರಿ ಸರ್ವೆ ನಂಬರ್ ನಲ್ಲಿ 1 ಎಕರೆ 5 ಗುಂಟೆ ಜಮೀನಿಗೆ ನನ್ನ ತಂದೆಗೆ ಕ್ರಯಪತ್ರ ಬರೆದುಕೊಟ್ಟಿದ್ದಾರೆಂದು ನುಡಿಯುತ್ತಾರೆ. ಸ.ನಂ. 83 ರಲ್ಲಿ 9 ಎಕರೆ 30 ಗುಂಟೆ ಜಮೀನಿನ ಪೈಕಿ 4 ಗುಂಟೆ ಏತ ನೀರಾವರಿಗೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ, ಆದರೆ ನಮಗೆ ಬರೆದುಕೊಟ್ಟ 1 ಎಕರೆ 5 ಗುಂಟೆ ಜಮೀನಿನ ಬಗ್ಗೆ ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ 2 ಗುಂಟೆ ಖರಾಬು ಇದೆ ಎಂದರೆ ನನಗೆ ಗೊತ್ತಿಲ್ಲ. ಉಳಿಕೆ 9 ಎಕರೆ 26 ಗುಂಟೆಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

4. ನಾನು 1 ಎಕರೆ 5 ಗುಂಟೆ ಜಮೀನಿನಲ್ಲಿ ಸ್ವಾಧೀನ ಇದ್ದೇನೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ. ಆ ರೀತಿ ಸ್ವಾಧೀನದಲ್ಲಿದ್ದೇನೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಲು ತೊಂದರೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಕ್ರಯಪತ್ರ ಇದೆ ಹಾಗೂ ನಾನೇ ವ್ಯವಸಾಯ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಸ.ನಂ.83 ರಲ್ಲಿ ಪ್ರತಿವಾದಿ ಮನೆ ಕಟ್ಟಿಕೊಂಡಿದ್ದಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಂತರ ಪುನಃ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ಅನಿವಾಳು ಗ್ರಾಮದವರು ಎಂದು ಗೊತ್ತು, ಆದರೆ ಎಲ್ಲಿ ವಾಸವಾಗಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ ಕೊಳವೆ ಬಾವಿ ಇದೆ ಎಂದು ನನಗೆ ಗೊತ್ತಿಲ್ಲ. ಸ.ನಂ. 83 ರಲ್ಲಿ ಏನಿದೆ ಎಂದು ನನಗೆ ಖುದ್ದು ಮಾಹಿತಿ ಗೊತ್ತಿಲ್ಲ. ಸ.ನಂ. 83 ರಲ್ಲಿರುವ ಜಮೀನನ್ನು ನಾನು ನೋಡಿಲ್ಲ ಎಂದರೆ ನನಗೆ ಸೇರಿದ ಜಾಗದ ಮಾತ್ರ ನಾನು ನೋಡಿದ್ದೇನೆ ಎಂದು ನುಡಿಯುತ್ತಾರೆ.

5. ನಾನು ದಾವಾಸ್ವತ್ತಿನಲ್ಲಿ ಸ್ವಾಧೀನ ಇರುವ ಬಗ್ಗೆ ನಮ್ಮ ಪಕ್ಕದ ಜಮೀನಿನವರಾದ ರಾಜೇಗೌಡ, ಅವರ ಮಗ ಹೊಂಬೇಗೌಡ, ಕುಬೇರೇಗೌಡ ಎಂಬುವವರು ನೋಡಿದ್ದಾರೆ. ಅವರನ್ನು ಸಾಕ್ಷಿದಾರರನ್ನಾಗಿ ಮಾಡಲು ನನಗೆ ತೊಂದರೆ ಇಲ್ಲ. ಪ್ರತಿವಾದಿ ನನಗೆ ಯಾವುದೇ ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ.1ರ ಮೂಲ ಪತ್ರ ಹಾಳಾಗಿದ್ದರಿಂದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದೇನೆ. ನಿಪಿ.1ರ ಸಾಕ್ಷಿದಾರರು ನನಗೆ ಗೊತ್ತು.

(ಮುಂದುವರೆದ ಪಾಟೀಸವಾಲನ್ನು ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**